ದಿನಾಂಕ 23-07-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2(ಎ) ಮತ್ತು (ಸಿ) ಪ್ರತಿವಾದಿಯರ ಪರ ಶ್ರೀ ಬಿ.ಎಸ್.ಡಿ ವಕೀಲರಿಂದ.**

ವಿಠೋಬ ನಾಯಕ ರವರು ಜೀವಂತ ಇರುವುದಿಲ್ಲ. ವಿಠೋಬ ನಾಯಕ ರವರು ತೀರಿಕೊಂಡು 04 ವರ್ಷ ಆಗಿರುತ್ತದೆ. ವಿಠೋಬ ನಾಯಕ ರವರ ಹೆಂಡತಿಯ ಹೆಸರು ಸತ್ಯಮ್ಮ ಹಾಗೂ ಶ್ಯಾಮಲಾ ಆಗಿರುತ್ತಾರೆ. ಸತ್ಯಮ್ಮ ರವರಿಗೆ ಒಂದು ಹೆಣ್ಣು ಮಗು ಇದ್ದು, ಶ್ಯಾಮಲಾ ಅವರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗು ಇರುತ್ತಾರೆ. ಈ ದಾವೆಯಲ್ಲಿ ಸತ್ಯಮ್ಮ, ಶ್ಯಾಮಲಾ ಹಾಗೂ ಅವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಈ ದಾವೆಯಲ್ಲಿ ಶ್ಯಾಮಲಾ ಅವರನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡು ಸುಮಾರು 50 ವರ್ಷಗಳು ಆಗಿರುತ್ತದೆ ಎಂದರೆ ನಿಜ. ನಮ್ಮ ಕುಟುಂಬದಲ್ಲಿ ವಿಠೋಬ ನಾಯಕ ರವರು ಹಿರಿಯರು ಆಗಿರುತ್ತಾರೆ. ವಿಠೋಬ ನಾಯಕ ರವರು ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನೋಡಿಕೊಂಡು ಹೋಗುತ್ತಾರೆ.

ನನ್ನ ಮದುವೆ 1985 ರಲ್ಲಿ ಆಗಿರುತ್ತದೆ. ನನ್ನ ಮದುವೆಯನ್ನು ವಿಠೋಬ ನಾಯಕ ರವರು ಮಾಡಿರುತ್ತಾರೆ ಎಂದರೆ ನಿಜ. ನನ್ನ ಸಹೋದರ ಹಾಗೂ ಸಹೋದರಿಯರ ಮದುವೆಯನ್ನು ವಿಠೋಬ ನಾಯಕ ರವರು ಮಾಡಿರುತ್ತಾರೆ ಎಂದರೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳ ಸರ್ವೆ ನಂಬರ ಹಾಗೂ ವಿಸ್ತೀರ್ಣವನ್ನು ಹೇಳಿಲ್ಲ ಎಂದರೆ ನಿಜ, ಕಾರಣ ಆಗ ನಮಗೆ ದಾವಾ ಆಸ್ತಿಗಳ ಸರ್ವೆ ನಂಬರ ಹಾಗೂ ವಿಸ್ತೀರ್ಣ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ಹೇಗೆ ಬಂದಿರುತ್ತವೆ ಮತ್ತು ಯಾರಿಗೆ ಬಂದಿರುತ್ತವೆ ಎಂಬುದರ ಬಗ್ಗೆ ವಿವರಣೆಗಳನ್ನು ಕೊಟ್ಟಿರುವುದಿಲ್ಲ ಎಂದರೆ ನಿಜ, ಕಾರಣ ನಮಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳೋ ಅಥವಾ ಅವುಗಳನ್ನು ಖರೀದಿ ಮಾಡಲಾಗಿದೆಯೋ ಎಂಬುದರ ಬಗ್ಗೆ ಹೇಳಿಲ್ಲ ಎಂದರೆ ನಿಜ. 2 ಕೆಜಿ ಚಿನ್ನ ಹಾಗೂ 10 ಕೆಜಿ ಬೆಳ್ಳಿ ಆಭರಣಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾವು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಮತ್ತು ಆ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

ವಿಠೋಬ ನಾಯಕ ಹಾಗೂ ವೆಂಕಟೇಶ ಅವರು ವಿಭಾಗ ಆಗಿರುತ್ತಾರೆ. ವಿಠೋಬ ನಾಯಕ ಹಾಗೂ ವೆಂಕಟೇಶ ರವರು ವಿಭಾಗವಾಗಿ 15 ರಿಂದ 20 ವರ್ಷ ಆಗಿರುತ್ತದೆ. ವಿಭಾಗದಲ್ಲಿ

ಅವರವರ ಆಸ್ತಿಗಳನ್ನು ಅವರವರು ನೋಡಿಕೊಂಡು ಹೋಗುತ್ತಿದ್ದಾರೆ ಎಂದರೆ ಗೊತ್ತಿಲ್ಲ. ವಿಠೋಬ ನಾಯಕ ಹಾಗೂ ವೆಂಕಟೇಶ ರವರ ಹೆಸರಿಗೆ ಏನೇನು ಆಸ್ತಿಗಳು ಬಂದಿರುತ್ತವೆ ಎಂಬುದರ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಯಾವ ದಾವಾ ಆಸ್ತಿಯನ್ನು ಯಾರಿಗೆ ಯಾವ ವರ್ಷದಲ್ಲಿ ಮಾರಾಟ ಮಾಡಲಾಗಿದೆ ಎಂಬುದರ ಬಗ್ಗೆ ಹೇಳಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ದಾವಾ ಕಾರಣವನ್ನು ತೋರಿಸಿಲ್ಲ ಎಂದರೆ ನಿಜ.

ನಿಪಿ-11, ನಿಪಿ-15 ರಿಂದ ನಿಪಿ-20, ನಿಪಿ-28 ರಿಂದ ನಿಪಿ-31 ರ ಕಾಲಂ 10 ರಲ್ಲಿ ಕೋರ್ಟ ಡಿಕ್ರಿ ಎಂದು ಬರೆಯಲಾಗಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಗಳು ನನ್ನ ತಂದೆ ಹಾಗೂ ತಾಯಿಗೆ ಹೇಗೆ ಬಂದಿರುತ್ತವೆ ಎಂಬುದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-102 ರಲ್ಲಿ 2 ಎಕರೆ ಜಮೀನು ಸನ್ಮಾನ್ಯ ರಾಜ್ಯಪಾಲರ ಹೆಸರಿನಲ್ಲಿ ಇರುತ್ತದೆ ಎಂದರೆ ನಿಜ. ನಾವು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಹಾಗೂ ಕಾಲೇಜಿನ ಅಧಿಕಾರಿಗಳಿಗೆ ನೋಟಿಸ ಕೊಟ್ಟಿರುತ್ತೇವೋ ಇಲ್ಲವೋ ನೆನಪಿಲ್ಲ. ನಿಪಿ-90 ರ ಪ್ರಕಾರ ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾವು ಜಿಲ್ಲಾಧಿಕಾರಿಗಳಿಗೆ ಹಾಗೂ ಸರಕಾರದ ಪರವಾಗಿ ಅಧಿಕಾರಿಗಳಿಗೆ ಮತ್ತು ಕಾಲೇಜಿನ ಪ್ರಾಂಶುಪಾಲರಿಗೆ ನೋಟಿಸನ್ನು ಕೊಟ್ಟಿರುವುದಿಲ್ಲ ಎಂದರೆ ನೆನಪಿಲ್ಲ. ಕಾಲೇಜಿನ ಪ್ರಾಂಶುಪಾಲರನ್ನು ಮೊದಲು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿ ನಂತರ ಅವರನ್ನು ದಾವೆಯಿಂದ ತೆಗೆದಿರುತ್ತೇವೆ ಎಂದರೆ ನಿಜ. ಈ ದಾವೆಯಲ್ಲಿ ನಾವು 8 ನೇ ಪ್ರತಿವಾದಿ, ತಾಯಮ್ಮ, 20 ನೇ ಪ್ರತಿವಾದಿ, 1 ನೇ ಪ್ರತಿವಾದಿ, 9 ನೇ ಪ್ರತಿವಾದಿಯರನ್ನು ಈ ದಾವೆಯಿಂದ ತೆಗೆದಿರುತ್ತೇವೆ. ಮೇಲೆ ಹೇಳಿದವರನ್ನು ಈ ದಾವೆಯಿಂದ ಕೈಬಿಟ್ಟಿದ್ದರಿಂದ ಈ ದಾವೆ ಊರ್ಜಿತ ಆಗುವುದಿಲ್ಲಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಿಠೋಬ ನಾಯಕ ಹಾಗೂ ವೆಂಕಟೇಶ ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ನನ್ನ ಅಜ್ಜನ ಆಸ್ತಿಗಳು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ನನ್ನ ಅಜ್ಜನ ಆಸ್ತಿಗಳು ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ದಾವಾ ಕಾರಣವಿಲ್ಲದೇ ನಾವು ಈ ದಾವೆಯನ್ನು ಹೂಡಿದ್ದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಅವಶ್ಯಕ ಪಕ್ಷಗಾರರನ್ನು ಈ ದಾವೆಯಿಂದ ಕೈಬಿಟ್ಟಿದ್ದರಿಂದ ಈ ದಾವೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಿಠೋಬ ನಾಯಕ ಹಾಗೂ ವೆಂಕಟೇಶ ರವರ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ವೆಂಕಟೇಶ ಹಾಗೂ ವಿಠೋಬ ನಾಯಕ ರವರ ಹತ್ತಿರ 2 ಕೆಜಿ ಚಿನ್ನ ಮತ್ತು 10 ಕೆಜಿ ಬೆಳ್ಳಿ ಇರುತ್ತದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ ಮತ್ತು ಈ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.